ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 19-04-2017

# ಪತ್ರಿಕಾ ಆಮಂತ್ರಣ

1. ಯುವ ಸಬಲೀಕರಣ ಇಲಾಖೆವತಿಯಿಂದ ಹಾಕಿ ಕ್ರೀಡಾಂಗಣದ ನವೀಕೃತ ಟರ್ಫ್ ಹಾಗೂ ಫ್ಲಡ್ ಲೈಟಿಂಗ್ ವ್ಯವಸ್ಥೆ:

ಉದ್ಘಾಟನೆ

ಪ್ರಮೋದ್ ಮಧ್ವರಾಜ್, ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಮೀನುಗಾರಿಕಾ ಸಚಿವರು.

ವಿಶೇಷ ಆಹ್ವಾನಿತರು:

ಸದಾನಂದ ಗೌಡರು,
ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು, ಕೇಂದ್ರ ಸರ್ಕಾರ

ಅನಂತಕುಮಾರ್,
ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಕೇಂದ್ರ ಸರ್ಕಾರ.

ಜ್ಯೋತಿ ಬೆಳಗಿಸುವವರು:

ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು.

ಅಧ್ಯಕ್ಷತೆ:

ಎನ್.ಎ. ಹ್ಯಾರೀಸ್, ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ.
ದಿನಾಂಕ: 20-04-2017, ಗುರುವಾರ, ಸಮಯ ಸಂಜೆ 4-00 ಗಂಟೆಗೆ
ಸ್ಥಳ: 'ಅಕ್ಕಿತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣ' ಶಾಂತಿನಗರ, ಬೆಂಗಳೂರು.

# ಮಾಧ್ಯಮದವರ ಗಮನಕ್ಕೆ

## ಮಾಧ್ಯಮ ವರದಿಗಾರರಿಗೆ ಹವಾಮಾನ ಸಂಬಂಧಿತ ವಿಕೋಪಗಳ ಕುರಿತು ಕಾರ್ಯಾಗಾರ

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕರ್ನಾಟಕ ರಾಜ್ಯದ ಮಾಧ್ಯಮ ವರದಿಗಾರರಿಗೆ ಹವಾಮಾನ ಸಂಬಂಧಿತ ವಿಕೋಪಗಳ ಕುರಿತು ಮಾಹಿತಿ ಹಾಗೂ ಸಲಹೆಗಳ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸಲು ಏಪ್ರಿಲ್ 22 ರಂದು ಬೆಳಿಗ್ಗೆ 10.30 ಗಂಟೆಗೆ ಅರ್ಧ ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಇತ್ತೀಚಿನ ದಿನಗಳಲ್ಲಿ ಹವಾಮಾನದಲ್ಲಿ ಹಲವಾರು ವೈಪರೀತ್ಯಗಳುಂಟಾಗುತ್ತಿದ್ದು ಅದರಿಂದಾಗಿ ಸಾಮಾನ್ಯ ಜನಜೀವನದ ಮೇಲೆ ತೀವ್ರತರ ಪರಿಣಾಮಗಳಾಗುತ್ತಿರುವುದು ಕಂಡುಬಂದಿದೆ. ಈ ರೀತಿಯ ಹವಾಮಾನ ಸಂಬಂಧಿತ ವಿಕೋಪಗಳಿಂದಾಗುವ ಪರಿಣಾಮಗಳನ್ನು ತಗ್ಗಿಸಲು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ನೈಸರ್ಗಿಕ ವಿಕೋಪಗಳ ಕುರಿತು ವೈಜ್ಞಾನಿಕ ಮಾಹಿತಿ ಮತ್ತು ಸಲಹೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯವನ್ನು ಮಾಧ್ಯಮಗಳು ಈಗಾಗಲೇ ಕೈಗೊಂಡಿದೆ. ಈ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಮಾಧ್ಯಮ ವರದಿಗಾರರುಗಳಿಗೆ ಇನ್ನಷ್ಟು ನಿಖರ ಮಾಹಿತಿ ಅಗತ್ಯವಿರುವುದು ಕಂಡುಬಂದಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ, ಭಾರತ ಸರ್ಕಾರವೂ ನೈಸರ್ಗಿಕ ವಿಕೋಪಗಳ ಕುರಿತು ಮಾಧ್ಯಮ ವರದಿಗಾರರುಗಳಿಗೆ ತಾಂತ್ರಿಕ ಮಾಹಿತಿಯನ್ನೊದಗಿಸಲು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ನೆರವಾಗಲು ಅಗತ್ಯವಿರುವ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲು ಸಲಹೆ ನೀಡಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕರ್ನಾಟಕ ಸರ್ಕಾರ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ನೊಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಸಂಭವನೀಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಜವಾಬ್ದಾರಿಯನ್ನು ಹೊಂದಿದೆ. ಈ ಕೇಂದ್ರವು ರಾಜ್ಯದ ಎಲ್ಲಾ 6000 ಗ್ರಾಮ ಪಂಚಾಯಿತಿಗಳಲ್ಲಿ ದೂರಸ್ಥ ಮಳೆಮಾಪನ ಕೇಂದ್ರಗಳು ಹಾಗೂ ಎಲ್ಲಾ 747 ಹೋಬಳಿ ಕೇಂದ್ರಗಳಲ್ಲಿ ದೂರಸ್ಥ ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸಿ ಹವಾಮಾನ ಮುನ್ಸೂಚನೆಯನ್ನೂ ನೀಡುತ್ತಿದೆ. ಈ ಎಲ್ಲಾ ಮಾಹಿತಿ, ಮುನ್ಸೂಚನೆ ಹಾಗೂ ಸಲಹೆಗಳನ್ನು ಜನಸಾಮಾನ್ಯರಿಗೆ ಸಕಾಲದಲ್ಲಿ ತಲುಪಿಸಲು ಹಲವು ಕ್ರಮ ಕೈಗೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಡಾ. ಸಿ. ಎನ್. ಪ್ರಭು, ಅವರನ್ನು ಮೊಬೈಲ್ ಸಂಖ್ಯೆ 8762171751 ಮೂಲಕ ಸಂಪರ್ಕಿಸಬಹುದುದಾಗಿದೆ ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು 50 ವರದಿಗಾರರಿಗೆ ಮಾತ್ರ

ಅವಕಾಶವಿದ್ದು, ನೊಂದಣಿ ಮಾಡಿಕೊಳ್ಳಲು ಇಮೇಲ್ dmc.kar@gmail.com ಗೆ ಮೇಲ್ ಮಾಡಬಹುದಾಗಿದೆ.

**ಪತ್ರಿಕಾ ಪ್ರಕಟಣೆ**

# ದೇಶದಲ್ಲಿ ಮುಂಚೂಣಿಯಲ್ಲಿರುವ ರಾಜ್ಯದ ಈಜುಪಟುಗಳು

**– ಸಚಿವ ಪ್ರಮೋದ್ ಮಧ್ವರಾಜ್**

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ಕರ್ನಾಟಕದ ಈಜುಪಟುಗಳು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ. ಸುಮಾರು 25 ವರ್ಷಗಳಿಂದ ನಮ್ಮ ಈಜು ಪಟುಗಳು ಮೊದಲನೇ ಸ್ಥಾನ ಬಿಟ್ಟುಕೊಡದೇ ಪದಕಗಳನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಮೀನುಗಾರಿಕಾ ಸಚಿವ ಪ್ರಮೋದ್ ಮಧ್ವರಾಜ್ ಅವರು ತಿಳಿಸಿದರು.

ಇಂದು ಬೆಂಗಳೂರು ಹಲಸೂರು ಬಳಿಯಿರುವ 'ಕೆನ್ನಿಂಗ್‌ಟನ್ ಈಜುಕೊಳ" ವನ್ನು ಉದ್ಘಾಟಿಸಿ ಮಾತನಾಡುತ್ತಾ 1971 ರಂದು ನಿರ್ಮಾಣವಾಗಿದ್ದ ಈಜುಕೊಳವು 1995 ರಿಂದ ಇಲಾಖೆಗೆ ಹಸ್ತಾಂತರಗೊಂಡಿದೆ. ಈ ಈಜು ಕೊಳವನ್ನು 2008 ರವರೆಗೂ ನಿಗದಿತವಾಗಿ ನಿರ್ವಹಣೆ ಮಾಡುತ್ತಾ ಮೇಲ್ದರ್ಜೆಗೆ ಆಧುನೀಕರಿಸುತ್ತಾ ನಿರ್ವಹಿಸಲಾಗುತ್ತಿತ್ತು. ಈಗ 290 ಕೋಟಿ ರೂ. ಗಳ ವೆಚ್ಚದಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಸರ್ಕಾರವು ಈ ವರ್ಷದಿಂದ 1000 ಕ್ರೀಡಾಪಟುಗಳನ್ನು ಗುರುತಿಸಿ ಪ್ರೋತ್ಸಾಹ ನೀಡುತ್ತಿದೆ. ಆದ್ದರಿಂದ ರಾಜ್ಯದ ಯುವಕ ಯುವತಿಯರು ಉತ್ತಮ ರೀತಿಯ ತರಬೇತಿ ಪಡೆದು ಅಂತರರಾಷ್ಟ್ರೀಯ ಮಟ್ಟದಲ್ಲೂ ಬಹುಮಾನ ಪಡೆಯುವಂತಾಗಬೇಕೆಂದರು.

ಈಜುಕೊಳವನ್ನು ಮೋಜು ಹಾಗೂ ಆಟವಾಡಲು ಬಳಸಿಕೊಳ್ಳದೇ ಉತ್ತಮ ತರಬೇತಿಯನ್ನು ಪಡೆದು ರಾಜ್ಯಕ್ಕೆ, ಸರ್ಕಾರಕ್ಕೆ ಒಳ್ಳೆಯ ಕೀರ್ತಿ ತರಬೇಕೆಂದು ನಗರಾಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಯುವಜನತೆಗೆ ಕರೆ ನೀಡಿದರು.

ಈ ಸಮಾರಂಭದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಪಿ.ಸಿ. ಮೋಹನ್, ಬಿ.ಬಿ.ಎಂ.ಪಿ. ಸದಸ್ಯೆ ಮಮತಾ ಶರವಣನ್, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಮೀರ್ ರೋಷನ್ ಅಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕ

ಅನುಪಮ್ ಅಗರ್‌ವಾಲ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಎಸ್‌ಎಂ:ಜೆಡಿ:ಜಿಪಿಆರ್.**

# ಏಪ್ರಿಲ್ 24 ರಂದು
# ಡಾ. ರಾಜ್‌ಕುಮಾರ್ ಅವರ 89ನೇ ಜನ್ಮ ದಿನಾಚರಣೆ

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕರ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ ಏಪ್ರಿಲ್ 24 ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಡಾ. ರಾಜ್‌ಕುಮಾರ್ 89ನೇ ಜನ್ಮ ದಿನಾಚರಣೆಯನ್ನು ಹಮ್ಮಿಕೊಂಡಿದೆ.

ಈ ಸಮಾರಂಭದ ಉದ್ಘಾಟನೆಯನ್ನು ಖ್ಯಾತ ಕಲಾವಿದೆ ಶ್ರೀಮತಿ ಲಕ್ಷ್ಮೀ ಅವರು ನೆರವೇರಿಸಲಿದ್ದಾರೆ. ವಿಧಾಸಭಾ ಸದಸ್ಯ ಆರ್.ವಿ. ದೇವರಾಜ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಸಾಹಿತಿ ಮತ್ತು ಚಿಂತಕರು ಆದ ಬರಗೂರು ರಾಮಚಂದ್ರಪ್ಪ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ.

ರಾಸಾಯನಿಕ ಮತ್ತು ರಸಗೊಬ್ಬರ ಕೇಂದ್ರ ಸಚಿವರು ಹಾಗೂ ಸಂಸದರು ಆದ ಅನಂತಕುಮಾರ್, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಿದ್ದಾರೆ.

ಹಿರಿಯ ಚಲನಚಿತ್ರ ನಿರ್ಮಾಪಕಿ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ಶ್ರೀ ಕಂಠೀರವ ಸ್ಟುಡಿಯೋ ನಿಮಯತದ ಅಧ್ಯಕ್ಷರಾದ ಶ್ರೀಮತಿ ಅಶ್ವಿನಿ ಕೃಷ್ಣಮೂರ್ತಿ, ಕರ್ನಾಟಕ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು, ಹಿರಿಯ ಕಲಾವಿದ ಡಾ. ಶಿವರಾಜ್‌ಕುಮಾರ್, ಡಾ. ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿರುವರು.

ಈ ಸಂದರ್ಭದಲ್ಲಿ ಡಾ. ರಾಜ್‌ಕುಮಾರ್ ಚಿತ್ರಗಳ ಗೀತಗುಚ್ಛ ಕಾರ್ಯಕ್ರಮ ನಡೆಯಲಿದೆ.

**ಎಸ್‌ಎಂ:ಜೆಡಿ:ಜಿಪಿಆರ್.**

# ಮನೆಯಂಗಳದಲ್ಲಿ ಮಾತುಕತೆ ನಾಗೇಶ್ ಹೆಗಡೆ ತಿಂಗಳ ಅತಿಥಿ

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ಹಿರಿಯ ಪತ್ರಕರ್ತ, ಖ್ಯಾತ ಪರಿಸರ, ವಿಜ್ಞಾನ ಲೇಖಕ ನಾಗೇಶ್ ಹೆಗಡೆ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏಪ್ರಿಲ್ 22 ರಂದು ಹಮ್ಮಿಕೊಂಡಿರುವ "ಮನೆಯಂಗಳದಲ್ಲಿ ಮಾತುಕತೆ" ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಏಪ್ರಿಲ್ 22 ರಂದು ಶನಿವಾರ ಸಂಜೆ 4.00 ಗಂಟೆಗೆ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕಮವು ಜೆ. ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಲಿದೆ.

ಇದಕ್ಕೂ ಮೊದಲು ಮಧ್ಯಾಹ್ನ 3.00 ಗಂಟೆಗೆ ರವಿರಾಜು ಎಸ್. ಹಾಸು ಅವರ ಸುಗಮ ಸಂಗೀತ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿದೆ.

**ಎಸ್‌ಎಂ:ಜೆಡಿ:ಜಿಪಿಆರ್.**

# ಹಾಸನದಲ್ಲಿ ಏರ್‌ಮನ್ ಹುದ್ದೆಗಳಿಗೆ ನೇಮಕಾತಿ ರ್‍ಯಾಲಿ

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ಹಾಸನದಲ್ಲಿ ಏಪ್ರಿಲ್ 27 ರಿಂದ 29 ರವರೆಗೆ ಭಾರತೀಯ ವಾಯುಪಡೆಯ ಏರ್‌ಮನ್ ಹುದ್ದೆಗಳಿಗೆ ನೇಮಕಾತಿ ರ್‍ಯಾಲಿ ನಡೆಯಲಿದೆ.

ಹಾಸನದ ಸಾಲಗಾಮೆ ರಸ್ತೆಯಲ್ಲಿರುವ ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ರ್‍ಯಾಲಿಯಲ್ಲಿ ಗ್ರೂಫ್ ವೈ ಟ್ರೇಡ್‌ಗಳ (ಆಟೋಮೊಬೈಲ್ ಟೆಕ್ನಿಷಿಯನ್,

ಗ್ರೌಂಡ್ ಟ್ರೇನಿಂಗ್ ಇನ್ಸ್‌ಟ್ರಕ್ಟರ್ , ಐಎಎಫ್ (ಪೊಲೀಸ್) ಏರ್‌ಮೆನ್ ಹುದ್ದೆಗಳಿಗೆ ಆಯ್ಕೆ ನಡೆಯಲಿದೆ.

1997 ರ ಜುಲೈ 7 ರಿಂದ 2000 ದ ಡಿಸೆಂಬರ್ 20 ರ ನಡುವೆ ಜನಿಸಿದ ಕನಿಷ್ಠ 165 ಸೆಂ.ಮೀ. ಎತ್ತರದ ಕರ್ನಾಟಕ ರಾಜ್ಯದ ಅವಿವಾಹಿತ ಪುರುಷರು ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಬಹುದು.

ಅಭ್ಯರ್ಥಿಗಳು ಇಂಟರ್‌ಮೀಡಿಯೆಟ್/ಪಿಯುಸಿ/10+2 ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಕೇಂದ್ರ/ರಾಜ್ಯ ಶಿಕ್ಷಣ ಮಂಡಳಿಗಳು ಅನುಮೋದಿಸಿದ ಯಾವುದೇ ವಿಷಯಗಳಲ್ಲಿ ಕನಿಷ್ಠ ಶೇ 50 ರಷ್ಟು ಸರಾಸರಿ ಅಂಕ ಹಾಗೂ ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ 50 ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅರ್ಹ ಅಭ್ಯರ್ಥಿಗಳು ಪರೀಕ್ಷಾ ಸ್ಥಳದಲ್ಲಿ ಮೂಲ ಅಂಕಪಟ್ಟಿ ಮತ್ತು ಎಸ್‌ಎಸ್‌ಎಲ್‌ಸಿ ಪ್ರಮಾಣ ಪತ್ರ ಇಂಟರ್‌ಮೀಡಿಯೆಟ್/ಪಿಯುಸಿ/10+2 ಉತ್ತೀರ್ಣರಾದ ಕುರಿತ ಪ್ರಮಾಣ ಪತ್ರ ಮತ್ತು ಎಲ್ಲಾ ಪ್ರಮಾಣ ಪತ್ರಗಳ ನಾಲ್ಕು ದೃಢೀಕೃತ ಪ್ರತಿಗಳು ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ 7 ಭಾವಚಿತ್ರಗಳೊಂದಿಗೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಭಾರತೀಯ ವಾಯುಪಡೆಯ ವೆಬ್‌ಸೈಟ್ www.arimenselection.gov.in ಅಥವಾ 7, ಏರ್‌ಮೆನ್ ಸೆಲೆಕ್ಷನ್ ಸೆಂಟರ್, ನಂ 1, ಕಬ್ಬನ್ ರಸ್ತೆ, ಬೆಂಗಳೂರು – 560 001, ದೂರವಾಣಿ ಸಂಖ್ಯೆ 080 – 25592199, ಇ ಮೇಲ್ co.7asc-ja@gov.in ಇಲ್ಲಿ ಸಂಪರ್ಕಿಸಬಹುದು. ಅಭ್ಯರ್ಥಿಗಳು ತಮ್ಮ ಸಮೀಪದ ಜಿಲ್ಲಾ ಉದ್ಯೋಗಾಧಿಕಾರಿಗಳನ್ನು ಸಹ ಸಂಪರ್ಕಿಸಬಹುದಾಗಿದೆ.

**ಎಸ್‌ಎಂ:ಜೆಡಿ:ಜಿಪಿಆರ್.**

# AIR FORCE RECRUITMENT RALLY

Bengaluru, April 19 (Karnataka Information)

Indian Air Force is conducting a recruitment rally at Hasanamba Indoor Stadium, Salagame Road, Hassan from 27 April 2017 to 30 Apr 2017 (written test on 27 and 29 April 2017) to select Airmen in Group 'Y' (Automobile Technician, Ground Training, Ground Training Instructor and IAF (Police) trades. Unmarried male Indian Citizens from the State of Karnataka are eligible. Candidae should be born between 07 July 97 to 20 December, 2000 (both days inclusive).

Minimum Height 16.5 Cm. Educational Qualification – (PUC) /10+2/ Equivalent Examination in any stream/subjects approved by central/State Education Board with a minimum 50% marks in aggregate and 50% marks in English.

Eligible candidates should report to the venue on the date of examination for concerned districts with original marks sheet and passing certificates of matriculation, intermediate (10+2)/II PUC and four self attested photocopies of all certificates and seven copies of recent passport size colour photographs.

For details log on to Indian Air Force websive www.airmenselection.gov.in or contact 7 Airmen Selection Centre, No. 1 Cubbon Road, Bengaluru-560 001, Telephoe No. 080-25592199, email co.7asc-ka@gov.in. The candidates may also contact the nearest District Employment Officer.

Sm/jd/gpr

# ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ
# 51 ನೇ ಘಟಿಕೋತ್ಸವ ಸಮಾರಂಭ

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 51 ನೇ ಘಟಿಕೋತ್ಸವವನ್ನು ಏಪ್ರಿಲ್ 24 ರಂದು ಬೆಳಿಗ್ಗೆ 11.00 ಗಂಟೆಗೆ ಜಿ.ಕೆ.ವಿ.ಕೆ. ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಏರ್ಪಡಿಸಿದೆ.

ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗ ಹಾಗೂ ಮಹಾ ನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ಭಾರತ ಸರ್ಕಾರ, ಕೃಷಿ ಭವನ ನವದೆಹಲಿಯ ಡಾ. ತ್ರಿಲೋಚನ ಮೋಹಪಾತ್ರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಕರ್ನಾಟಕ ರಾಜ್ಯ ಗೌರವಾನ್ವಿತ ರಾಜ್ಯಪಾಲ ವಜುಭಾಯಿ ವಾಲ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ.

ಕೃಷಿ ಸಚಿವರು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಯದ ಸಹಕುಲಾಧಿಪತಿಗಳು ಆದ ಕೃಷ್ಣ ಬೈರೇಗೌಡ ಅವರು ಘಟಿಕೋತ್ಸವ ಸಮಾರಂಭದಲ್ಲಿ ಉಪಸ್ಥಿತರಿರುತ್ತಾರೆ.

ಎಸ್‌ಎಂ:ಜೆಡಿ:ಜಿಪಿಆರ್.

# ದೂರದರ್ಶನ ವಾಹಿನಿಯಲ್ಲಿ
# ನೆಲದ ಸಿರಿ ಮಾಲಿಕೆಯ ಸಾಕ್ಷ್ಯಚಿತ್ರ

**ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)**

**ದೂರದರ್ಶನ ವಾಹಿನಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮಾ ಸಾಧನೆ ಮಾಡಿರುವ ನಾಡಿನ ಸಾಧಕರ/ಸಂಸ್ಥೆಗಳು ಹಾಗೂ ಸರ್ಕಾರದ**

**ಅಭಿವೃದ್ಧಿ ಕಾರ್ಯಗಳ ಕುರಿತು  ನಿರ್ಮಿಸಿರುವ ನೆಲದ ಸಿರಿ ಮಾಲಿಕೆಯ ಸಾಕ್ಷ್ಯಚಿತ್ರಗಳ ಪ್ರಸಾರ ಇಂದಿನಿಂದ ಪ್ರತಿದಿನ ಸಂಜೆ 6.00 ಗಂಟೆಯಿಂದ 6.15 ಗಂಟೆ ಅವಧಿಯಲ್ಲಿ ಪ್ರಸಾರಗೊಳ್ಳಲಿದೆ.**

**ಈ ವಿಶೇಷ ಸರಣಿ ಸಾಕ್ಷ್ಯಚಿತ್ರಗಳ ಪ್ರಸಾರದಲ್ಲಿ ದಿನಾಂಕ: 20–4–2017 ರಂದು ಶ್ರೀಮತಿ ಬಿ.ಜಿ.ಕುಸುಮಾ ಮತ್ತು ಡಾ॥ ಸುನಂದಾ ಕುಲಕರ್ಣಿ, 21–4–2017 ರಂದು ಜಿಲ್ಲಾಡಳಿತ ಭವನ ಮತ್ತು ಚಾಮರಾಜನಗರ ಜಿಲ್ಲಾಡಳಿತ ಭವನ  24–4–2017 ರಂದು ಶ್ರೀಮತಿ ನಂದಿತಾ ರಾಕೇಶ್ 25–14–2017 ರಂದು  ಹೊಂಬೆಳಕು ಮತ್ತು ಆಸರೆ ಸಂಸ್ಥೆಯ ಸಾಕ್ಷ್ಯಚಿತ್ರಗಳು ಭಿತ್ತರವಾಗಲಿವೆ.**

**ಎಸ್‌ಎಂ/ಜೆಡಿ/ಕೆಎಂ**

## <u>ವನ್ಯಜೀವಿ ಸಂರಕ್ಷಣೆಯ ಮಹತ್ವ ಕುರಿತು ವಿಶೇಷ ಅಭಿಯಾನ</u>

**ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)**

ಪ್ರವಾಸೋದ್ಯಮ ಇಲಾಖೆಯು ಸುವರ್ಣ ಮತ್ತು ಕನ್ನಡಪ್ರಭ ಮಾಧ್ಯಮಗಳ ಸಹಯೋಗದೊಂದಿಗೆ 'ವನ್ಯಜೀವಿ ಸಂರಕ್ಷಣಾ ಅಭಿಯಾನ' ವನ್ನು ಮಾನ್ಯ ಮುಖ್ಯಮಂತ್ರಿಗಳು ೧೯/೦೪/೨೦೧೭ರಂದು ಅನಾವರಣಗೊಳಿಸಿದ್ದಾರೆ.

ದಕ್ಷಿಣ ಭಾರತದ ಹೆಮ್ಮೆಯ ನಟ, ನಿರ್ಮಾಪಕ ಮತ್ತು ನಿರ್ದೇಶಕ ಪ್ರಕಾಶ್ ರಾಜ್ ಈ ಅಭಿಯಾನದ ರಾಯಭಾರಿಯಾಗಿದ್ದಾರೆ. ರಾಜ್ಯದ ೫ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ೨ ವನ್ಯಜೀವಿಧಾಮಗಳಿಗೆ ಪ್ರಕಾಶ್ ರಾಜ್ ಭೇಟಿ ನೀಡಲಿದ್ದಾರೆ. ಈ ಬಾರಿ ಈ ಅಭಿಯಾನದಲ್ಲಿ ಕನ್ನಡದ ಐವರು ಹೆಸರಾಂತ ಚಿತ್ರನಟಿಯರು ಸಹ ಪಾಲ್ಗೊಂಡು ವನ್ಯಜೀವಿ ಸಂರಕ್ಷಣೆಯ ಮಹತ್ವ ತಿಳಿಹೇಳುವ ಕೆಲಸದಲ್ಲಿ ಭಾಗಿಯಾಗಲಿರುವುದು ಮತ್ತೊಂದು ವಿಶೇಷ.

ಈ ಜನಜಾಗೃತಿ ಅಭಿಯಾನದ ಮೂಲಕ ಕಾಡಂಚಿನ ಗ್ರಾಮಗಳ ಜನರಲ್ಲಿ ವನ್ಯಜೀವಿ ಸಂರಕ್ಷಣೆ ಜತೆಗೆ ವನ್ಯಜೀವಿಗಳ ಜತೆಗೆ ಸಹಬಾಳ್ವೆ ನಡೆಸುವ ಮಹತ್ವ ತಿಳಿಸಿಕೊಡುವ ಈ ಪ್ರಯತ್ನಕ್ಕೆ ಪ್ರವಾಸೋದ್ಯಮ ಇಲಾಖೆಯು ಕಟಿಬದ್ಧವಾಗಿದೆ.

ಕಾಡಂಚಿನ ಗ್ರಾಮಗಳ ಶಾಲಾ–ಕಾಲೇಜುಗಳಲ್ಲಿ ಅಭಿಯಾನ ನಡೆಯಲಿದೆ. ಒಂದು ನಿರ್ದಿಷ್ಟ ಗ್ರಾಮ ಪಂಚಾಯ್ತಿಗೆ ಅತ್ಯುತ್ತಮ ಅರಣ್ಯ ಸ್ನೇಹಿ ಗ್ರಾಮಪಂಚಾಯ್ತಿ ಪ್ರಶಸ್ತಿ ಎನ್ನುವ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅಲ್ಲದೇ, ಈ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ವನ್ಯಜೀವಿ ಸಂರಕ್ಷಣೆಯ ಕೆಲಸಕ್ಕೆ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ನಾನಾ ಸ್ಪರ್ಧೆ ಏರ್ಪಡಿಸಿ ಗೆದ್ದವರು ಅಭಿಯಾನದ ರಾಯಭಾರಿ ಪ್ರಕಾಶ್ ರಾಜ್‌ರಿಂದ ಬಹುಮಾನ ಸ್ವೀಕರಿಸಲಿದ್ದಾರೆ. ವನ್ಯಜೀವಿ ಸಂರಕ್ಷಣೆಯಲ್ಲಿ ಅರಣ್ಯ

ಇಲಾಖೆ ಜತೆ ಕೈಗೆ ಕೈ ಸೇರಿಸಿ ಶ್ರಮಿಸುವ ಗ್ರಾಮೀಣ ಯುವಕರನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ.

ಅರಣ್ಯ ಸಂರಕ್ಷಣೆಯಲ್ಲಿ ಸದಾ ಮುಂಚೂಣಿಯಲ್ಲಿದ್ದು ಕೆಲಸ ಮಾಡುವ ಅರಣ್ಯ ಇಲಾಖೆಯ ಕೆಳ ಹಂತದ ಸಿಬ್ಬಂದಿ ಮತ್ತವರ ಕುಟುಂಬದ ಸದಸ್ಯರ ಜತೆಗೆ ಅಭಿಯಾನದ ರಾಯಭಾರಿ ಹಾಗೂ ಸೆಲೆಬ್ರಿಟಿ ಅತಿಥಿಗಳು ಸಂವಾದ ನಡೆಸಲಿದ್ದಾರೆ. ಬೇಟೆ ನಿಗ್ರಹ ಶಿಬಿರಗಳಿಗೆ ಭೇಟಿ ನೀಡಿ ಸಂರಕ್ಷಣೆಯ ಕಷ್ಟಗಳನ್ನು ಅರಿಯುವ ಜತೆಗೆ ಮಾನವ–ವನ್ಯಜೀವಿ ಸಂಘರ್ಷ ನಡೆಯುವ ಕೆಲ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಕಡೆ ಬೀದಿ ನಾಟಕಗಳು ಸಹ ನಡೆಯಲಿವೆ.

ಈ ಅಭಿಯಾನದ ಚಟುವಟಿಕೆಗಳನ್ನು ಸುವರ್ಣ ನ್ಯೂಸ್ ಚಾನೆಲ್ ಪ್ರಸಾರ ಮಾಡುತ್ತದೆ. ಕನ್ನಡಪ್ರಭ ಪತ್ರಿಕೆಯಲ್ಲಿ ಸರಣಿ ಲೇಖನಗಳು ಪ್ರಕಟವಾಗಲಿವೆ. ಸ್ಟುಡಿಯೋದಲ್ಲಿ ನಾನಾ ಚರ್ಚಾಗೋಷ್ಠಿಗಳು ನಡೆಯಲಿದ್ದು ಗಣ್ಯರು ಹಾಗೂ ವಿಷಯ ಪರಿಣತರು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ೨೦೧೭ರ ವರ್ಷವನ್ನು 'ವನ್ಯಜೀವಿಗಳ ವರ್ಷ' ಎಂದು ಘೋಷಣೆ ಮಾಡಿದೆ. ಈ ಇಡೀ ವರ್ಷ ವನ್ಯಜೀವಿಗಳ ಮಹತ್ವದ ಬಗ್ಗೆ ಜನಜಾಗೃತಿ ಮೂಡಿಸುವ ಹಾಗೂ ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ.

ಸುವರ್ಣ ನ್ಯೂಸ್ ಮತ್ತು ಕನ್ನಡ ಪ್ರಭ ರಾಜ್ಯದ ಪ್ರತಿಷ್ಠಿತ ಹಾಗೂ ವಿಶ್ವಾಸಾರ್ಹ ಮಾಧ್ಯಮಗಳಾಗಿದ್ದು, ತನ್ನ ಸಾಮಾಜಿಕ ಜವಾಬ್ದಾರಿಯ ಅಂಗವಾಗಿ ಕಳೆದ ವರ್ಷ "ಹುಲಿ ಸಂರಕ್ಷಣಾ ಅಭಿಯಾನ" ಎನ್ನುವ ಹೆಸರಿನಲ್ಲಿ ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಈ ಆಂದೋಲನಕ್ಕೆ ಕಾಡಂಚಿನ ಭಾಗಗಳಲ್ಲಿ ಭಾರಿ ಜನಸ್ಪಂದನೆ ದೊರಕಿತ್ತು ಎಂದು ಪ್ರವಾಸೋದ್ಯಮ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಪೌಷ್ಠಿಕತೆಗಾಗಿ ರಾಜ್ಯದಿಂದ ಗ್ರ್ಯಾಂಡ್ ಛಾಲೆಂಜಸ್

## ಸ್ಟಾರ್ಟ್ ಅಪ್ ಗಳಿಂದ ನವೀನ ಪರಿಕಲ್ಪನೆಗಳಿಗೆ ಆಮಂತ್ರಣ

**ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)**

ರಾಜ್ಯದ ಜನತೆಗೆ ಮತ್ತಷ್ಟು ಪೌಷ್ಟಿಕತೆ ಒದಗಿಸುವುದನ್ನು ಖಚಿತಪಡಿಸಿಕೊಳ್ಳುವ ದಿಕ್ಕಿನಲ್ಲಿ ಕರ್ನಾಟಕ ಸರ್ಕಾರವು ಅಪೌಷ್ಟಿಕತೆ ವಿಷಯ ಕುರಿತಂತೆ ಸ್ಟಾರ್ಟ್ ಅಪ್ ಗಳಿಂದ ನವೀನ ಪರಿಕಲ್ಪನೆಗಳನ್ನು ಆಮಂತ್ರಿಸಿದೆ.

ಕೆಬಿಟ್ಸ್ ಸಂಸ್ಥೆ ಹಾಗೂ ಕರ್ನಾಟಕ ಸರ್ಕಾರದ ಸ್ಟಾರ್ಟ್ ಅಪ್ ಕೋಶವು ಐಕೆಪಿ ನಾಲೆಡ್ಜ್ ಪಾರ್ಕ್ ನ ಸಹಯೋಗದೊಂದಿಗೆ ಗ್ರ್ಯಾಂಡ್ ಛಾಲೆಂಜಸ್-ಕರ್ನಾಟಕ ಹೆಸರಿನಲ್ಲಿ ಅನಾವರಣಗೊಳಿಸಲಾಗಿದೆ. ಆಸಕ್ತ ಅರ್ಜಿದಾರರು ಆನ್ ಲೈನ್ ನಲ್ಲಿ www.impact-karnataka.org ಮೂಲಕ ಮೇ 31, 2017ರವರೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

ಕರ್ನಾಟಕ ಸ್ಟಾರ್ಟಪ್ ನೀತಿಯಡಿಯಲ್ಲಿ ಗ್ರ್ಯಾಂಡ್ ಛಾಲೆಂಜಸ್-ಕರ್ನಾಟಕವು ನಗರಾಭಿವೃದ್ಧಿ, ಕೃಷಿ, ಆರೋಗ್ಯ ರಕ್ಷೆ, ಪೌಷ್ಠಿಕತೆ ಮತ್ತು ಶಿಕ್ಷಣ ಮುಂತಾದ ಆದ್ಯತಾ ವಲಯಗಳ ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸಬಲ್ಲ ಹೊಸ ತಂತ್ರಜ್ಞಾನಗಳಿಗೆ ಅಥವಾ ನಾವೀನ್ಯತೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ನಾಲ್ಕನೇ ಹಂತದ ಈ ಯೋಜನೆಯಲ್ಲಿ **"ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಅಪೌಷ್ಠಿಕತೆ ಮತ್ತು ಕ್ಯಾಲೊರಿ-ಪ್ರೊಟೀನ್-ಮೈಕ್ರೊನ್ಯೂಟ್ರಿಯೆಂಟ್ ಕೊರತೆಗಳನ್ನು ನೀಗುವ ಗುರಿ ಹೊಂದಿರುವ ಕರ್ನಾಟಕದಲ್ಲಿ ತಪಾಸಣೆಗೈಯಲು ಹಾಗೂ ಗಾತ್ರಹಿಗ್ಗಿಸಲು ನಾವೀನ್ಯತೆಯ ಮಧ್ಯಸ್ಥಿಕೆಗಳು."** ವಿಷಯವನ್ನು ಧ್ಯೇಯವಾಗಿಟ್ಟುಕೊಳ್ಳಲಾಗಿದೆ.

ಸಮಾಜದ ಸವಾಲುಗಳಿಗೆ ಕಾರ್ಯಸಾಧುವಾದ, ವಿಸ್ತೃತಗೊಳ್ಳಬಲ್ಲ ಪರಿಹಾರಗಳನ್ನು ಕಂಡುಹಿಡಿಯಲು ತಂತ್ರಜ್ಞಾನವನ್ನು ಬಳಸುವ ಮೂಲಕ ನಾವೀನ್ಯತೆಯನ್ನು ಉತ್ತೇಜಿಸುವ ಸಲುವಾಗಿ ಸ್ಪಂದನಶೀಲ ಸ್ಟಾರ್ಟಪ್ ಪರಿಸರವನ್ನು ಬಳಸಿಕೊಳ್ಳುವ ಉದ್ದೇಶವನ್ನು ಕರ್ನಾಟಕ ಸರ್ಕಾರವು ಹೊಂದಿದೆ. ಗ್ರ್ಯಾಂಡ್ ಛಾಲೆಂಜಸ್ ನ ಈ ಮಾದರಿಯು ಪ್ರತಿ ವರ್ಷವೂ 5 ಹೊಸ ಸವಾಲುಗಳನ್ನು ಬಿಂಬಿಸುವ ಗುರಿ ಹೊಂದಿದ್ದು ಅವುಗಳನ್ನು ಪರಿಹರಿಸಲು ಹೊಸ ಕಲ್ಪನೆಗಳನ್ನು ಆಮಂತ್ರಿಸಿ ಕ್ಲಿಷ್ಟ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.

ಪ್ರಾರಂಭಿಕ ಅನುದಾನವೊಂದರಿಂದ ಈ ಕಲ್ಪನೆಗಳನ್ನು ಪುರಸ್ಕರಿಸಲಾಗುತ್ತದೆ, ಜೊತೆಗೆ ಸೂಕ್ತ ಮಟ್ಟದಲ್ಲಿ ಪೈಲಟ್ ಯೋಜನೆಯ ಅನುಷ್ಠಾನಕ್ಕಾಗಿ ಧನಸಹಾಯವನ್ನೂ ಒದಗಿಸಲಾಗುತ್ತದೆ.

**ಪ್ರಥಮ ಛಾಲೆಂಜ್** ನಲ್ಲಿ ನಗರ ಪ್ರದೇಶಗಳಲ್ಲಿ ಒಳಚರಂಡಿ ಹೊರಚೆಲ್ಲುವಿಕೆ ನಿಯಂತ್ರಣದ ಉಸ್ತುವಾರಿ ಮಾಡುವಲ್ಲಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ತಂತ್ರಜ್ಞಾನ-ಪ್ರೇರಿತ ವ್ಯವಸ್ಥೆಯೊಂದನ್ನು ನಿರ್ಮಿಸುವ ಕುರಿತಾದದ್ದಾಗಿತ್ತು. ಪ್ರಸ್ತಾವನೆಗಳಿಗಾಗಿದ್ದ ಈ ಕರೆಯು ಪುರಸ್ಕಾರಕ್ಕಾಗಿ ಮೂರು ಪ್ರಸ್ತಾವನೆಗಳನ್ನು ಗುರುತಿಸಿ ಅಂತಿಮಗೊಳಿಸಿತ್ತು.

**ದ್ವಿತೀಯ ಛಾಲೆಂಜ್** ವಿವಿಧ ಬೆಳೆಗಳಲ್ಲಿ ಗಿಡರೋಗಗಳು ಹಾಗೂ ಕೀಟ ಸೋಂಕುಗಳನ್ನು ಮುಂಚಿತವಾಗಿ ಕಂಡುಹಿಡಿದು, ಮುನ್ನೆಚ್ಚರಿಕೆ ನೀಡಲು ಭೌತಿಕ ಅಥವಾ ರೂಪಾಂತರದ ಅಂಶಗಳನ್ನು ಕಂಡುಕೊಂಡು ಒದಗಿಸುವ ತಂತ್ರಜ್ಞಾನ-ಪ್ರೇರಿತ ವ್ಯವಸ್ಥೆಯೊಂದನ್ನು ಕುರಿತ ವಿನೂತನ ಪರಿಹಾರಗಳ ಬಗ್ಗೆಯಾಗಿತ್ತು.

**ತೃತೀಯ ಛಾಲೆಂಜ್** ಆರೋಗ್ಯ ಸುರಕ್ಷೆ ಕುರಿತಾಗಿದ್ದು ಅರ್ಥಪೂರ್ಣವಾಗಿ, ಪಾರದರ್ಶಕವಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ಸಮುದಾಯಗಳನ್ನು ತೊಡಗಿಸುವ ಮೂಲಕ ಪ್ರಾಥಮಿಕ ಆರೋಗ್ಯ ಸೇವೆಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವ ತಂತ್ರಜ್ಞಾನ-ಪ್ರೇರಿತ ವ್ಯವಸ್ಥೆಯೊಂದನ್ನು ನಿರ್ಮಿಸುವ ಸಲುವಾಗಿತ್ತು. ಪ್ರಸ್ತುತದಲ್ಲಿ, ಇದರ ಪ್ರಸ್ತಾವನೆಗಳ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ.

# ಏ.22 ಮತ್ತು 23 ರಂದು  ಕೋಲಾರದಲ್ಲಿ ಉದ್ಯೋಗ ಮೇಳ- 2017

ಬೆಂಗಳೂರು, ಏಪ್ರಿಲ್ 19 (ಕರ್ನಾಟಕ ವಾರ್ತೆ)

ಕೋಲಾರ ಜಿಲ್ಲಾಡಳಿತ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 22 ಮತ್ತು 23 ರಂದು ಎರಡು ದಿನಗಳ ಬೃಹತ್ ಉದ್ಯೋಗ ಮೇಳವನ್ನು ಕೋಲಾರ ನಗರದ ಶ್ರೀನಿವಾಸಪುರ ರಸ್ತೆಯಲ್ಲಿರುವ ಸಿ. ಬೈರೇಗೌಡ ತಾಂತ್ರಿಕ ಮಹಾವಿದ್ಯಾಲಯದಲ್ಲಿ  ಬೆಳಿಗ್ಗೆ 10-00 ಗಂಟೆಗೆ ನಡೆಯಲಿದೆ.

ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ  ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಆರ್. ರಮೇಶ್‌ಕುಮಾರ್ ಅವರು ಉದ್ಘಾಟಿಸಲಿದ್ದಾರೆ.  ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ವರ್ತೂರು ಆರ್. ಪ್ರಕಾಶ್ ಅವರು ವಹಿಸಲಿದ್ದಾರೆ.  ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಮತ್ತು ಕಾರ್ಮಿಕ ಸಚಿವ ಸಂತೋಷ್ ಎಸ್ ಲಾಡ್ ಹಾಗೂ ಕೋಲಾರ ಲೋಕಸಭಾ ಸದಸ್ಯ ಡಾ: ಕೆ.ಹೆಚ್. ಮುನಿಯಪ್ಪ ಅವರು ಉಪಸ್ಥಿತರಿರುವರು.

ಉದ್ಯೋಗ ಮೇಳಕ್ಕೆ ಈಗಾಗಲೇ ಸುಮಾರು 10,221  ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು ಈ ಪೈಕಿ 7,625  ಯುವಕರು, 2,563  ಯುವತಿಯರು. ಅದರಲ್ಲಿ ಮೊಬೈಲ್ ಆ್ಯಪ್ ಮೂಲಕ 2,034 ಮತ್ತು ವೆಬ್‌ಸೈಟ್ ಮೂಲಕ 8,187  ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಸುಮಾರು 15 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಹಾಗೂ 150 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸುವ ನಿರೀಕ್ಷೆ ಇದೆ.

ಕೋಲಾರ ತಾಲ್ಲೂಕಿನಲ್ಲಿ ಸುಮಾರು 3,495  ಬಂಗಾರಪೇಟೆಯಲ್ಲಿ ಸುಮಾರು 2,427 ಮುಳಬಾಗಿಲಿನಲ್ಲಿ ಸುಮಾರು 1,147  ಮಾಲೂರಿನಲ್ಲಿ ಸುಮಾರು 695  ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸುಮಾರು 1,027  ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇತರೆ ಜಿಲ್ಲೆಗಳವರು ಸುಮಾರು 1,312 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಈ ಅಂಕಿ ಅಂಶಗಳ ಪ್ರಕಾರ ಕೋಲಾರ ತಾಲ್ಲೂಕಿನಲ್ಲಿ ಹೆಚ್ಚು ಹಾಗೂ ಮಾಲೂರು ತಾಲ್ಲೂಕಿನಲ್ಲಿ ಕಡಿಮೆ ಮಂದಿ ನೋಂದಾಯಿಸಿಕೊಂಡಿದ್ದಾರೆ.

ಉದ್ಯೋಗ ಮೇಳದಲ್ಲಿ ಭಾಗವಹಿಸಲು ಈಗಾಗಲೇ 130 ಕ್ಕೂ ಅಧಿಕ ಕಂಪನಿಗಳು ನೋಂದಯಿಸಿಕೊಂಡಿದ್ದು ಇವುಗಳಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ಉದ್ಯೋಗಿಗಳಿಗೆ ಬೇಡಿಕೆ ಇದೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಸಾಕಷ್ಟು ತಯಾರಿಯನ್ನು ನಡೆಸುತ್ತಿದೆ. ಈ ಉದ್ಯೋಗ ಮೇಳವು ಸರ್ಕಾರದಿಂದ ಆಯೋಜಿಸಲಾಗುತ್ತಿದ್ದು ಅಭ್ಯರ್ಥಿಗಳು ಯಾವುದೇ ಶುಲ್ಕ ನೀಡುವಂತಿಲ್ಲ ಹಾಗೂ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು ಎಂದು ಸೂಚಿಸಲಾಗಿದೆ.

ನೋಂದಣಿ ಮಾಡಿಕೊಂಡವರಿಗೆ ಉದ್ಯೋಗ ಮೇಳದ ಮೊದಲ ದಿನದಂದು ಅವರ ವಿದ್ಯಾಭ್ಯಾಸಕ್ಕೆ ತಕ್ಕಂತೆ 3 ಕಂಪನಿಗಳನ್ನು ಸೂಚಿಸಲಾಗುವುದು. ಅವುಗಳಿಗೆ ಹೋಗಿ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ನಂತರ ಎರಡನೇ ದಿನದಂದು ಇತರೆ ಯಾವುದೇ ಕಂಪನಿಗೆ ಬೇಕಾದರೂ ಅವರು ಹೋಗಿ ಸಂದರ್ಶನದಲ್ಲಿ ಭಾಗವಹಿಸಬಹುದು.

ಉದ್ಯೋಗ ಮೇಳವು ಏ.22 ಮತ್ತು 23 ರಂದು ನಡೆಯಲಿದ್ದು ಅಂದಿನ ದಿನ ಉದ್ಯೋಗ ಮೇಳ ನಡೆಯುವ ಸ್ಥಳದಲ್ಲಿಯೇ ನೋಂದಣಿಗೆ ಅವಕಾಶಗಳನ್ನು ಕಲ್ಪಿಸಲಾಗಿದೆ. ಅದರಂತೆ ಆನ್‌ಲೈನ್ ಮುಖಾಂತರ ನೋಂದಾಯಿಸಿಕೊಂಡ ಜಿಲ್ಲೆಯ ಎಲ್ಲಾ ಉದ್ಯೋಗಾಕಾಂಕ್ಷಿಗಳಿಗೆ ಜಿಲ್ಲಾಡಳಿತದಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಏ.12 ರಿಂದ 18 ರವರೆಗೆ ಮೃದು ಕೌಶಲ್ಯ ಅಭಿವೃದ್ಧಿಗಾಗಿ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಗಿದೆ.

ಉದ್ಯೋಗ ಮೇಳದಲ್ಲಿ ಟೆಕ್ನಿಕಲ್ ಮತ್ತು ನಾನ್ ಟೆಕ್ನಿಕಲ್ ಹುದ್ದೆಗಳು ಅವಶ್ಯಕವಾಗಿದೆ. ಬಿ.ಇ, ಇತರೆ ಪದವಿ, ಡಿಪ್ಲೊಮಾ, ಐಟಿಐ, ನರ್ಸಿಂಗ್, ಪಿಯುಸಿ, ಜೆ.ಟಿ.ಟಿ.ಸಿ, ಎಸ್.ಎಸ್.ಎಲ್.ಸಿ ಹಾಗೂ ಇತರೆ ವಿದ್ಯಾಭ್ಯಾಸ ಹೊಂದಿದ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶಗಳು ಇವೆ.

ಉದ್ಯೋಗ ಮೇಳಕ್ಕೆ ಸಂಬಂಧಿಸಿದಂತೆ ಉದ್ಯೋಗಕಾಂಕ್ಷಿಗಳು ಸಹಾಯವಾಣಿ ಸಂಖ್ಯೆ 080-41126846, 7406989827, 7406989764 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. ಅಷ್ಟೇ ಅಲ್ಲದೆ ಉಚಿತ ನೊಂದಣಿ ಕೇಂದ್ರಗಳಾದ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

<u>ಉದ್ಯೋಗ ಮೇಳದಲ್ಲಿ ಭಾಗವಹಿಸುವ ಪ್ರಮುಖ ಕಂಪನಿಗಳು</u>

* **Larsen & Toubro ECC Division**
* ಇನ್ಫೋಸಿಸ್ ಟೆಕ್ನಾಲಜಿ ಲಿಮಿಟೆಡ್
* ಟಾಟಾ ಪವರ್-ಮೇವಗಲ್ ಐಎ
* ಟಿ.ವಿ.ಎಸ್. ಮೋಟಾರ್ಸ್-ಹೊಸೂರು
* ಟೆಕ್ ಮಹೀಂದ್ರ-ಬಿಪಿಓ ಸಲ್ಯೂಷನ್ಸ್
* ಕೋಟಕ್ ಬ್ಯಾಂಕ್
* **LIC** ಆಫ್ ಇಂಡಿಯಾ
* ಹೋಂಡಾ ಟೂ ವೀಲರ್ಸ್ ಪ್ಲಾಂಟ್-ನರಸಾಪುರ
* **HDFC** ಬ್ಯಾಂಕ್
* ಮುಥೂಟ್ ಫೈನಾನ್ಸ್
* ಅಡೆಕೋ
* ಬ್ರಿಟಾನಿಯಾ ಫುಡ್ಸ್
* ಡೊಮಿನೋಸ್ ಫಿಜ್ಜಾ
* ಮಿಟ್ಸುಬಿಷಿ ಎಲಿವೇಟರ್ಸ್-ಮೇಮಗಲ್ ಐಎ
* ಸ್ವಿಗ್ಗಿ
* ಎಕ್ಸಿಡಿ ಕ್ಲಾಚಸ್ಇಂಡಿಯಾ ಲಿಮಿಟೆಡ್-ನರಸಾಪುರ
* ನಿಪ್ಪೋನ್ ಪಿಸ್ತಾನ್ ರಿಂಗ್ಸ್-ಮಾಲೂರು
* ಇಂಡೋ ಆಟೋಟೆಕ್-ನರಸಾಪುರ ಐಎ
* ಸ್ಕ್ಯಾನಿಯ-ನರಸಾಪುರ ಐಎ
* ಶಿವಂ ಆಟೋ-ವೇಮಗಲ್
* ಕೆಫೆ ಕಾಫಿ ಡೇ
* ನಾರಾಯಣ ಹೃದಯಾಲಯ